# ಬಲೂನ್ ಸ್ಲೀವ್ಸ್ ಟ್ರೆಂಡ್



**ಇದು ಟ್ರೆಂಡಿ ಉಡುಪುಗಳ ಕಾಲ. ಪುಟ್ಟ ಹುಡುಗಿಯರಿಂದ ಹಿಡಿದು ವಯಸ್ಸಾದ ಮಹಿಳೆಯರೂ ಟ್ರೆಂಡಿ ಉಡುಗೆಗಳ ಬೆನ್ನು ಹತ್ತಿದ್ದಾರೆ. ಫ್ಯಾಷನ್ ವಿನ್ಯಾಸಕರೂ ಗ್ರಾಹಕರ ಬೇಡಿಕೆಗೆ ತಕ್ಕಂತೆ ಹಾಗೂ ಇಂದಿನ ಕಾಲಕ್ಕೆ ಸೂಕ್ತವಾದ ಉಡುಪು ವಿನ್ಯಾಸಗೊಳಿಸಿ ಫ್ಯಾಷನ್‌ಪ್ರಿಯರ ಮನತಣಿಸುತ್ತಿದ್ದಾರೆ. ಸದ್ಯ ಬಲೂನ್ ಸ್ಲೀವ್ಸ್ ಟ್ರೆಂಡ್‌ಸೆಟ್ಟರ್ ಎನಿಸಿಕೊಂಡಿದೆ.**

■ ಯು.ಎ.

ಉಡುಪಿನಲ್ಲಿ ಫ್ರಾಕ್ ಇರಲಿ, ಸಲ್ವಾರ್ ಇರಲಿ, ರವಿಕೆಯೇ ಇರಲಿ... ಇವುಗಳಲ್ಲಿ ಸ್ಲೀವ್ಸ್‌ಗೆ ಬಹಳ ಆದ್ಯತೆ. ಸ್ಲೀವ್ಸ್ ಅಂಡ್ ನೆಕ್ ಸರಿಯಾಗಿದ್ರೆ ಫ್ಯಾಷನಬಲ್ ಉಡುಗೆ ಎದ್ದು ಕಂಡಂತೆ, ಫ್ಯಾಷನ್ ಲೋಕದಲ್ಲಿ ಗೆದ್ದಂತೆಯೇ.

ತುಂಬು ತೋಳಿನ ಸಲ್ವಾರ್, ಬ್ಲೌಸ್‌ಗಳು ಕೊಂಚ ಕಾಲ ಫ್ಯಾಷನ್ ಆಗಿ ಮರೆಯಾದ ಬಳಿಕ ಬಂದಿದ್ದು ಬಲೂನ್ ಸ್ಲೀವ್ಸ್ ಉಡುಗೆ. ಆಡು ಭಾಷೆಯಲ್ಲಿ 'ಪುಗ್ಗ ಕೈ' ಎಂದು ಕರೆಸಿಕೊಳ್ಳುವ ಈ ಬಲೂನ್ ಸ್ಲೀವ್ಸ್ ಉಡುಪು ಪುಟಾಣಿಗಳಿಗೆ ಬಹಳ ಸೂಕ್ತವಾಗಿ ಕಾಣುವುದಾದರೂ ಇಂದು ಫ್ಯಾಷನ್‌ಪ್ರಿಯ ಮಹಿಳೆಯರು ವಯಸ್ಸಿನ ಹಂಗಿಲ್ಲದೆ ಇದೇ ಉಡುಪಿನ ಬೆನ್ನುಹತ್ತಿದ್ದಾರೆ.

ಹಾಗೆ ನೋಡಿದರೆ ಬಲೂನ್ ಸ್ಲೀವ್ಸ್ ಉಡುಪು ಇಂದು ನಿನ್ನೆಯ ಫ್ಯಾಷನ್ ಉಡುಗೆಯಲ್ಲ. ಅನಾದಿ ಕಾಲದಿಂದಲೂ ಮಿಂಚಿ ಮರೆಯಾಗುತ್ತಲೇ, ಕಣ್ಣಾಮುಚ್ಚಾಲೆಯಾಡುತ್ತಿದ್ದ ವಿಶಿಷ್ಟ ಉಡುಗೆಯಿದು. ಆದರೆ ಮಾರುಕಟ್ಟೆಯಲ್ಲಿ ಸಖತ್ ಸದ್ದು ಮಾಡಲಾರಂಭಿಸಿದ್ದು ಮಾತ್ರ 2019ರ ಅಂತ್ಯದಿಂದ.